

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆ ಮತ್ತು ಪ್ರಾಮಾಣಿಕತೆಯ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–05–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಮಸೀಹ್ ಮೌಊದ್(ಅ)ರ ಜೀವನ ಚರಿತ್ರೆಯನ್ನು ವಿವರಿಸುವಾಗ, ಅವರ ಸತ್ಯಸಂಧತೆಯ ಗುಣಮಟ್ಟದ ಕುರಿತಾದ ಕೆಲವು ಉಲ್ಲೇಖಗಳು ಮತ್ತು ಘಟನೆಗಳನ್ನು ವಿವರಿಸಲಾಗಿತ್ತು. ಇಂದು ಕೂಡ ನಾನು ಕೆಲವು ಘಟನೆಗಳನ್ನು ವಿವರಿಸಲಿದ್ದೇನೆ. ಡಾಕ್ಟರ್ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಕಡೆಯಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಮೇಲೆ ಕೊಲೆಯ ಯತ್ನದ ಒಂದು ಮೊಕದ್ದಮೆ ದಾಖಲಾಗಿತ್ತು. ಇದು ಅತ್ಯಂತ ಅಪಾಯಕಾರಿ ಪ್ರಕರಣವಾಗಿತ್ತು. ಇದು ಗಲ್ಲು ಶಿಕ್ಷೆಗೂ ಗುರಿಪಡಿಸುವಷ್ಟು ಅಪಾಯಕಾರಿ ಪ್ರಕರಣವಾಗಿತ್ತು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದಾರೆ. ರೋಮನ್ ನ್ಯಾಯಾಲಯದಲ್ಲಿ ಯಹೂದಿಯರಿಂದ ಹಝ್ರತ್ ಈಸಾ(ಅ)ರ ಮೇಲೆ ಹೂಡಲಾದ ಮೊಕದ್ದಮೆಯನ್ನು ಉಲ್ಲೇಖಿಸುತ್ತಾ, ಇಂತಹದ್ದೇ ಮೊಕದ್ದಮೆ ನನ್ನ ಮೇಲೂ ಆಗಿತ್ತು ಎಂದು ಅವರು ಹೇಳುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಸಾ ಮಸೀಹ್(ಅ)ರ ವಿರುದ್ಧ ಯಹೂದಿಯರು ಮೊಕದ್ದಮೆ ಹೂಡಿದ್ದರು, ಆದರೆ ಈ ಸರ್ಕಾರದಲ್ಲಿ ನನ್ನ ವಿರುದ್ಧ ಮೊಕದ್ದಮೆ ಹೂಡಿದವನು ಗೌರವಾನ್ವಿತ ಪಾದ್ರಿ ಮತ್ತು ಡಾಕ್ಟರ್ ಕೂಡ ಆಗಿದ್ದನು. ಅವನು ನನ್ನ ಮೇಲೆ ಕೊಲೆ ಯತ್ನದ ಮೊಕದ್ದಮೆಯನ್ನು ಹೂಡಿದನು ಮತ್ತು ಸಾಕ್ಷ್ಯಾಧಾರಗಳನ್ನು ಸಂಪೂರ್ಣ ಒದಗಿಸಿದನು, ಎಲ್ಲಿಯವರೆಗೆ ಎಂದರೆ ಈ ಜಮಾಅತಿನ ಕಡು ವಿರೋಧಿಯಾದ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಕೂಡ ನನ್ನ ವಿರುದ್ಧ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದರು. ತನ್ನಿಂದ ಸಾಧ್ಯವಾದಷ್ಟು ನನ್ನ ವಿರುದ್ಧ ಸಾಕ್ಷಿ ನುಡಿದರು. ಹಾಗೂ ಪ್ರಕರಣವನ್ನು ಸಂಪೂರ್ಣವಾಗಿ ನನ್ನ ವಿರುದ್ಧ ಸಾಬೀತುಪಡಿಸಲು ಪ್ರಯತ್ನಿಸಿದರು.

ಈ ಮೊಕದ್ದಮೆಯು ಗುರುದಾಸ್‌ಪುರದ ಡೆಪ್ಯೂಟಿ ಕಮಿಷನರ್ ಕ್ಯಾಪ್ಟನ್ ಡಗ್ಲಸ್‌ರ ನ್ಯಾಯಾಲಯದಲ್ಲಿ ಆಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲ ಸಾಕ್ಷ್ಯಗಳನ್ನು ನನ್ನ ವಿರುದ್ಧ ಅತ್ಯಂತ ಪ್ರಬಲವಾಗಿ ಮಂಡಿಸಲಾಯಿತು. ಇಂತಹ ಪರಿಸ್ಥಿತಿ ಮತ್ತು ಸನ್ನಿವೇಶದಲ್ಲಿ ನಾನು ಬಿಡುಗಡೆಗೊಳ್ಳುವೆನು ಎಂದು ಯಾವುದೇ ಕಾನೂನು ತಜ್ಞ ಅಥವಾ ಸಲಹೆಗಾರನಿಗೆ ಹೇಳಲು ಸಾಧ್ಯವಿರಲಿಲ್ಲ. ಆದರೆ ಮೊಕದ್ದಮೆಗೆ ಮೊದಲು ಅಲ್ಲಾಹನು ನನಗೆ ತಿಳಿಸಿದಂತೆಯೇ, ನಾನು ಈ ಕೇಸಿನಿಂದ ವಿಮುಕ್ತಗೊಳ್ಳುವೆನು ಎಂಬುದನ್ನು ಮುಂಚಿತವಾಗಿಯೇ ಪ್ರಕಟಪಡಿಸಿದ್ದೆ; ಕ್ಯಾಪ್ಟನ್ ಡಗ್ಲಸ್‌ರಿಗೆ ದಾವೆದಾರನ ಹೇಳಿಕೆಯ ಬಗ್ಗೆ ಸ್ವಲ್ಪ ಅನುಮಾನವಿದ್ದ ಕಾರಣ, ಮರು ತನಿಖೆ ಮಾಡಲು ಅಬ್ದುಲ್ ಹಮೀದ್‌ನನ್ನು ಪೊಲೀಸ್ ಅಧಿಕಾರಿ ಕ್ಯಾಪ್ಟನ್ ಲೆಮಾರ್ಚಂಡ್‌ರಿಗೆ ಒಪ್ಪಿಸಿದರು. ಅವರು ಅಬ್ದುಲ್ ಹಮೀದ್‌ನನ್ನು ಕರೆದು ಸತ್ಯವನ್ನು ಹೇಳುವಂತೆ ಕೇಳಿದರು. ಅಬ್ದುಲ್ ಹಮೀದ್ ಆಗಲೂ ತಾನು ಈ ಹಿಂದೆ ಮಂಡಿಸಿದ ಕಥೆಯನ್ನೇ ಹೇಳುತ್ತಿದ್ದನು. ಕ್ಯಾಪ್ಟನ್ ಸಾಹಿಬ್‌ರು ಕಟ್ಟುನಿಟ್ಟಾಗಿ ನಿಜವಾದ ಸಂಗತಿಯನ್ನು ಹೇಳುವಂತೆ ತಾಕೀತು ಮಾಡಿದರು. ಆಗ ಅವನು ಸತ್ಯವನ್ನು ಹೇಳಿದನು. ನನ್ನನ್ನು ಬೆದರಿಸಿ ನನ್ನಿಂದ ಈ ಹೇಳಿಕೆಯನ್ನು ಪಡೆದುಕೊಳ್ಳಲಾಗಿತ್ತು ಎಂದು ಸ್ಪಷ್ಟವಾಗಿ ಒಪ್ಪಿಕೊಂಡನು. ಮಿರ್ಝಾ ಸಾಹಿಬ್‌ರು ನನ್ನನ್ನು ಕೊಲೆ ಮಾಡಲು ಖಂಡಿತವಾಗಿಯೂ ಕಳುಹಿಸಿರಲಿಲ್ಲ ಎಂದು ಹೇಳಿದನು. ಈ ಹೇಳಿಕೆಯನ್ನು ಕೇಳಿ ಕ್ಯಾಪ್ಟನ್ ಸಂತೋಷಪಟ್ಟು ನಾವು ಪ್ರಕರಣವನ್ನು ಭೇದಿಸಿದ್ದೇವೆ ಎಂದು ಡೆಪ್ಯೂಟಿ ಕಮಿಷನರ್‌ಗೆ ಟೆಲಿಗ್ರಾಮ್ ಕಳುಹಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆ ಸಮಯದಲ್ಲಿ ನ್ಯಾಯಾಲಯದಲ್ಲಿ, ಸತ್ಯವು ಹೊರಬಂದಿದ್ದರಿಂದ ಡೆಪ್ಯೂಟಿ ಕಮಿಷನರ್ ತುಂಬಾ ಸಂತೋಷಪಟ್ಟಿದ್ದನ್ನು ಮತ್ತು ನನ್ನ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ ಆ ಕ್ರೈಸ್ತರ ಮೇಲೆ ಅವರಿಗೆ ವಿಪರೀತ ಕೋಪವಿದ್ದುದನ್ನು ನಾನು ನೋಡಿದೆ. ನೀವು ಆ ಕ್ರೈಸ್ತರ ವಿರುದ್ಧ ಮಾನ ನಷ್ಟ ಮೊಕದ್ದಮೆ ಹೂಡಬಹುದು ಎಂದು ಅವರು ನನ್ನೊಡನೆ ಹೇಳಿದರು. ಆದರೆ ನನಗೆ ಮೊಕದ್ದಮೆ ಮಾಡುವುದರಲ್ಲಿ ಆಸಕ್ತಿಯಿಲ್ಲದ ಕಾರಣದಿಂದ ನಾನು ಮೊಕದ್ದಮೆ ಹೂಡಲು ಇಚ್ಛಿಸುವುದಿಲ್ಲ ಮತ್ತು ನನ್ನ ಮೊಕದ್ದಮೆಯು ಆಕಾಶದಲ್ಲಿ ದಾಖಲಾಗಿದೆ ಎಂದಷ್ಟೇ ಹೇಳಿದೆ.

(ಹುಝೂರ್ ಹೇಳಿದರು:) ಇದೇ ಪ್ರಕರಣದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಪ್ರಾಮಾಣಿಕತೆ ಮತ್ತು ಉನ್ನತ ನೈತಿಕತೆಯ ಬಗ್ಗೆ ಓರ್ವ ಅಹ್ಮದಿಯೇತರ ವಕೀಲರಾದ ಮೌಲವಿ ಫಝಲ್ ದೀನ್ ಸಾಹಿಬ್‌ರ ಹೇಳಿಕೆಯಿದೆ. ಅವರು ಹೇಳುತ್ತಾರೆ: ನನ್ನ ಹೃದಯದಲ್ಲಿ ಮಿರ್ಝಾ ಸಾಹಿಬ್‌ರ ಬಗ್ಗೆ ಅಪಾರ ಗೌರವವಿದೆ. ಅವರ ಸ್ಥಾನ ಮತ್ತು ಘನತೆ ಅತ್ಯಂತ ಶ್ರೇಷ್ಠವೆಂದು ನಾನು ಪರಿಗಣಿಸುತ್ತೇನೆ. ಅವರ ವಾದಗಳ ಕುರಿತು ಅವರಿಗೆ ತಪ್ಪು ಸಂಭವಿಸಿರಬಹುದು ಎಂದು ಮನೋವಿಜ್ಞಾನದ ಆಧಾರದಲ್ಲಿ ನಾನು ಭಾವಿಸುತ್ತೇನೆ. ಆದರೂ ಅವರು ಖಂಡಿತವಾಗಿಯೂ ಒಬ್ಬ ಒಳ್ಳೆಯ ವ್ಯಕ್ತಿ ಆಗಿದ್ದರು.

ಇಂತಹದ್ದೇ ಒಂದು ನಿರೂಪಣೆಯನ್ನು ಹಿಂದೂ ಆದ ಲಾಲಾ ದೀನಾನಾಥ್‌ರಿಂದ ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಹೀಗೆ ವರದಿ ಮಾಡಿದ್ದಾರೆ: ಒಂದು ಸಭೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಒಬ್ಬರು ಅಸಭ್ಯವಾಗಿ ಮತ್ತು ಕೆಟ್ಟ ರೀತಿಯಲ್ಲಿ ಅವರ ಸಮ್ಮುಖದಲ್ಲೇ ವಿರೋಧಿಸಿದಾಗ ಅದನ್ನು ಕೇಳಿ ಮೌಲ್ವಿ ಫಜಲ್ ದೀನ್ ಸಾಹಿಬ್‌ರಿಗೆ ಬಹಳ ಕೋಪ ಬಂತು ಮತ್ತು ಬಹಳ ಆವೇಶದಿಂದ ಹೀಗೆ ಹೇಳಿದರು: ನಾನು ಮಿರ್ಝಾ ಸಾಹಿಬ್‌ರ ಅನುಯಾಯಿಯಲ್ಲ. ಅವರ ವಾದಗಳಲ್ಲಿ ನನಗೆ ನಂಬಿಕೆಯಿಲ್ಲ; ಆದರೆ ಮಿರ್ಝಾ ಸಾಹಿಬ್‌ರ ಭವ್ಯವಾದ ವ್ಯಕ್ತಿತ್ವ ಮತ್ತು ಉನ್ನತ ಸ್ವಭಾವಗುಣಕ್ಕೆ ನಾನು ಸಾಕ್ಷಿಯಾಗಿದ್ದೇನೆ. ನಾನೊಬ್ಬ ವಕೀಲ, ಮತ್ತು ಎಲ್ಲ ವಿಧ ಜನರ ಪ್ರಕರಣಗಳು ನನ್ನ ಬಳಿಗೆ ಬರುತ್ತವೆ. ಕಾನೂನು ಸಲಹೆಯ ಪ್ರಕಾರ ಅಗತ್ಯವಿದ್ದಾಗ ಹಿಂಜರಿಕೆಯಿಲ್ಲದೆ ತಮ್ಮ ಹೇಳಿಕೆಯನ್ನು ಬದಲಾಯಿಸಿಕೊಂಡ ಸಾವಿರಾರು ಜನರನ್ನು ನಾನು ನನ್ನ ಉದ್ಯೋಗದ ಅನುಭವದಲ್ಲಿ ನೋಡಿದ್ದೇನೆ. ಆದರೆ ಸತ್ಯದ ಮಾರ್ಗದಿಂದ ಹೆಜ್ಜೆ ಹಿಂದಿಡದ ವ್ಯಕ್ತಿಯಾಗಿ ನಾನು ನನ್ನ ಜೀವಿತಾವಧಿಯಲ್ಲಿ ನೋಡಿದ್ದು ಮಿರ್ಝಾ ಸಾಹಿಬ್‌ರನ್ನು ಮಾತ್ರವಾಗಿದೆ.

ಮಾರ್ಟಿನ್ ಕ್ಲಾರ್ಕ್‌ರ ಪ್ರಕರಣದಲ್ಲಿ ನಾನು ಮಿರ್ಝಾ ಸಾಹಿಬ್‌ರಿಗಾಗಿ ಒಂದು ಕಾನೂನು ಹೇಳಿಕೆಯನ್ನು ಬರೆದು ಸಲ್ಲಿಸಿದೆ. ಅದನ್ನು ಓದಿದ ಅವರು, ಇದರಲ್ಲಿ ಸತ್ಯಕ್ಕೆ ವಿರುದ್ಧವಾದ ಮಾತುಗಳು ಇವೆ ಎಂದು ಹೇಳಿದರು. ನಾನು ಹೇಳಿದೆ: ಆರೋಪಿಯ ಹೇಳಿಕೆಯು ಶಪಥದ ಹೇಳಿಕೆ (ಅಫಿಡವಿಟ್) ಆಗಿರುವುದಿಲ್ಲ. ತನಗೆ ಬೇಕಾದದ್ದನ್ನು ಹೇಳಲು ಕಾನೂನುಬದ್ಧವಾಗಿ ಅವರಿಗೆ ಅನುಮತಿ ಇರುತ್ತದೆ. ಅದನ್ನು ಕೇಳಿ ಮಿರ್ಝಾ ಸಾಹಿಬ್(ಅ) ಹೀಗೆ ಹೇಳಿದರು: ಕಾನೂನು ನನಗೆ ಈ ಅನುಮತಿಯನ್ನು ನೀಡಿರಬಹುದು, ಆದರೆ ದೇವನು ಅನುಮತಿ ನೀಡಿಲ್ಲ. ಆದ್ದರಿಂದ ನಾನು ನಿಜವಾದ ಸಂಗತಿಯನ್ನೇ ಮಂಡಿಸುತ್ತೇನೆ. ಆಗ ನಾನು ಅವರೊಡನೆ ಹೀಗೆ ಹೇಳಿದೆ: ನನಗೆ ಅಬ್ದುಲ್ ಹಮೀದ್ ಯಾರೆಂದು ಗೊತ್ತಿಲ್ಲ ಎಂದು ಮಾತ್ರ ನೀವು ಹೇಳಿರಿ, ಉಳಿದದ್ದನ್ನು ನಾವು ನೋಡಿಕೊಳ್ಳುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಎಲ್ಲ ಸಲಹೆಗಳನ್ನು ಕೇಳಿದ ನಂತರ ಹೀಗೆ ಹೇಳಿದರು: 'ನಾನು ಲೋಕದಲ್ಲಿ ಸತ್ಯವನ್ನು ಸ್ಥಾಪಿಸಲು ಬಂದಿದ್ದೇನೆ, ನನ್ನನ್ನು ಗಲ್ಲಿಗೇರಿಸಿದರೂ ನಾನು ಎಂದಿಗೂ ಸುಳ್ಳು ಹೇಳಲಾರೆ. ನನಗೆ ಅಬ್ದುಲ್ ಹಮೀದ್ ಯಾರೆಂದು ತಿಳಿದಿದೆ. ಅವನು ಖಾದಿಯಾನಿಗೆ ಬರುತ್ತಿದ್ದನು, ಅದನ್ನು ಅಲ್ಲಗಳೆಯಲು ನನ್ನಿಂದ ಸಾಧ್ಯವಿಲ್ಲ.' ಆಗ ನಾವು ಅವರೊಡನೆ ಹೀಗೆ ವಿನಂತಿಸಿದೆವು: ನೀವು ಸುಳ್ಳು ಹೇಳಲು ಬಯಸದಿದ್ದರೆ, ಅಸ್ಪಷ್ಟವಾಗಿ ಮಾತನಾಡಿರಿ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಹಾಗೆ ಮಾಡಲು ಕೂಡ ನನ್ನಿಂದ ಸಾಧ್ಯವಲ್ಲ. ದೇವನು ನನ್ನನ್ನು ಲೋಕದಲ್ಲಿ ತನ್ನ ಮಾದರಿಯನ್ನು ತೋರಿಸಲು ಕಳುಹಿಸಿದ್ದಾನೆ. ನನ್ನ ಜೀವವನ್ನು ಉಳಿಸಿಕೊಳ್ಳುವ ಸಲುವಾಗಿ ನೀವು ಹೇಳಿದಂತಹ ಮಾದರಿಯನ್ನು ಪ್ರಸ್ತುತಪಡಿಸಲು ನಾನು ಸಿದ್ಧನಲ್ಲ. ಸತ್ಯವನ್ನು ಹೇಳುವ ಮೂಲಕ ನನ್ನ ಜೀವ ಕಳೆದುಹೋದರೂ ನಾನು ಯಶಸ್ವಿಯಾದೆನು.

ನ್ಯಾಯಾಲಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಹೇಳಿಕೆಯನ್ನು ನೀಡುವಾಗ, ತನಗೆ ಅಬ್ದುಲ್ ಹಮೀದ್ ಪರಿಚಯವಿದ್ದಾನೆ ಎಂದು ಸ್ಪಷ್ಟವಾಗಿ ಹೇಳಿದರು. ಆದ್ದರಿಂದ ಬಿಡುಗಡೆಯಾಗುವುದು ಅಸಾಧ್ಯವೆಂದು ನಾವು ನಂಬಿದ್ದೆವು, ಆದರೆ ಈ ಕೇಸಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಲಭಿಸಿದ ದೈವಿಕ ಸಹಾಯವನ್ನು ಹಾಗೂ ಈ ಗಂಭೀರವಾದ ಕೇಸಿನಿಂದ ಅವರು ಗೌರವಾನ್ವಿತವಾಗಿ ವಿಮುಕ್ತಿ ಪಡೆಯುವುದರಲ್ಲಿ ಯಶಸ್ವಿಯಾದುದನ್ನು ಕಂಡು ನಾವು ಆಶ್ಚರ್ಯಚಕಿತರಾದೆವು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: 1916ರಲ್ಲಿ ಮಿಸ್ಟರ್ ವಾಲ್ಟರ್ ಅಹ್ಮದಿಯಾ ಜಮಾಅತಿನ ಬಗ್ಗೆ ಅನ್ವೇಷಣೆ ನಡೆಸಲು ಖಾದಿಯಾನಿಗೆ ಬಂದರು. ಈ ಜಮಾಅತಿನ ಸ್ಥಾಪಕರ ಹಿರಿಯ ಸಹಾಬಿಯೊಬ್ಬರೊಂದಿಗೆ ಭೇಟಿ ಮಾಡಿಸಿಕೊಡಬೇಕೆಂದು ಅವರು ಆಗ್ರಹ ವ್ಯಕ್ತಪಡಿಸಿದರು. ಆ ಸಮಯದಲ್ಲಿ ದಿವಂಗತ ಮುನ್‌ಶಿ ಅರೋಡೆ ಖಾನ್ ಸಾಹಿಬ್(ರ) ಖಾದಿಯಾನಿನಲ್ಲಿದ್ದರು. ವಾಲ್ಟರ್‌ರನ್ನು ಮುನ್‌ಶಿ ಸಾಹಿಬ್‌ರಿಗೆ ಭೇಟಿ ಮಾಡಿಸಿಕೊಡಲಾಯಿತು. ಔಪಚಾರಿಕ ಮಾತುಕತೆ ನಂತರ ಮುನ್‌ಶಿ ಸಾಹಿಬ್(ರ)ರೊಡನೆ ಮಿಸ್ಟರ್ ವಾಲ್ಟರ್ ಕೇಳಿದರು: ಮಿರ್ಝಾ ಸಾಹಿಬ್‌ರ ಸತ್ಯತೆಯ ಯಾವ ಪುರಾವೆಯು ನಿಮ್ಮ ಮೇಲೆ ಹೆಚ್ಚು ಪ್ರಭಾವ ಬೀರಿದೆ? ಮುನ್‌ಶಿ ಸಾಹಿಬ್(ರ) ಹೀಗೆ ಉತ್ತರಿಸಿದರು: ನಾನು ಹೆಚ್ಚು ವಿದ್ಯಾವಂತನಲ್ಲ ಮತ್ತು ನನಗೆ ಹೆಚ್ಚಿನ ಜ್ಞಾನಪರವಾದ ಪುರಾವೆಗಳ ಬಗ್ಗೆ ತಿಳಿದಿಲ್ಲ, ಆದರೆ ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದ ವಿಷಯ ಹಝ್ರತ್ ಮಸೀಹ್ ಮೌಊದ್(ಅ)ರ ವ್ಯಕ್ತಿತ್ವ ಆಗಿದೆ. ಅವರಿಗಿಂತ ಹೆಚ್ಚು ಸತ್ಯವಂತ, ಹೆಚ್ಚು ಪ್ರಾಮಾಣಿಕ ಮತ್ತು ದೇವನ ಮೇಲೆ ಹೆಚ್ಚು ನಂಬಿಕೆ ಇರುವ ವ್ಯಕ್ತಿಯನ್ನು ನಾನು ನೋಡಿಲ್ಲ. ಅವರನ್ನು ನೋಡಿ ಯಾರೂ ಇವರು ಸುಳ್ಳುಗಾರ ಎಂದು ಹೇಳಲು ಸಾಧ್ಯವಿರಲಿಲ್ಲ, ಉಳಿದಂತೆ ನಾನು ಅವರ ಮುಖ ದರ್ಶನಕ್ಕಾಗಿ ಕಾತರದಿಂದ ಇರುತ್ತಿದ್ದೆ. ನನಗೆ ಹೆಚ್ಚಿನ ಪುರಾವೆಗಳ ಬಗ್ಗೆ ಗೊತ್ತಿಲ್ಲ. ಇದನ್ನು ಹೇಳುತ್ತಾ, ಮುನ್‌ಶಿ ಸಾಹಿಬ್(ರ) ಹಝ್ರತ್ ಮಸೀಹ್ ಮೌಊದ್(ಅ)ರ ನೆನಪಿನಲ್ಲಿ ವಿಚಲಿತರಾಗಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು ಮತ್ತು ಅಳುತ್ತಾ ಅಳುತ್ತಾ ಅವರಿಗೆ ಬಿಕ್ಕಳಿಕೆ ಶುರುವಾಯಿತು. ಮಿಸ್ಟರ್ ವಾಲ್ಟರ್‌ನ ಮುಖವು ಸಂಪೂರ್ಣವಾಗಿ ಮಸುಕಾಯಿತು.

ಅವರು ತಮ್ಮ ಅಹ್ಮದಿಯಾ ಮೂವ್‌ಮೆಂಟ್ ಎಂಬ ಪುಸ್ತಕದಲ್ಲಿ ಈ ಘಟನೆಯನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ. ತನ್ನ ಸಹವಾಸದಲ್ಲಿ ಇಂತಹ ಜನರನ್ನು ಸೃಷ್ಟಿಸಿದ ವ್ಯಕ್ತಿಯನ್ನು ನಾವು ಕನಿಷ್ಠ ವಂಚಕ ಎಂದು ಕರೆಯಲು ಸಾಧ್ಯವಿಲ್ಲ ಎಂದು ಬರೆದಿದ್ದಾರೆ.

ಮಿರ್ಝಾ ರಹೀಮ್ ಬಕ್ಷ್ ಸಾಹಿಬ್ ಹೇಳುತ್ತಾರೆ: ನಾನು ಒಬ್ಬ ಅಹ್ಮದಿಯನ್ನು ಭೇಟಿಯಾದೆ, ಸ್ವಲ್ಪ ಸಮಯ ಅವರೊಡನೆ ಮಾತನಾಡಿದೆ. ನನಗೆ ಎಲ್ಲವು ಮನವರಿಕೆಯಾಯಿತು. ಅನಂತರ ರಾತ್ರಿ ನಾನು ಒಂದು ಕನಸು ಕಂಡೆನು, ನಾವು ನಾಲ್ವರು ಅಣ್ಣತಮ್ಮಂದಿರು ಒಂದು ಬೆಟ್ಟದ ಗುಹೆಯಲ್ಲಿ ದಾರಿ ತಪ್ಪಿದ್ದೇವೆ, ದಾರಿ ಸಿಗುತ್ತಿಲ್ಲ. ಅನಂತರ ನಾನು ಒಂದು ಬದಿಯಿಂದ ಮೇಲಕ್ಕೆ ಹತ್ತಿ ಬಂದೆ. ರೈಲು ಓಡುತ್ತಿರುವುದನ್ನು ನಾನು ನೋಡಿದೆ, ಆದರೆ ಗಾಡಿಯು ನೆಲದಿಂದ ತುಂಬಾ ಎತ್ತರದಲ್ಲಿತ್ತು. ನಾನು ಹೇಗೆ ಹತ್ತಬೇಕು ಎಂಬ ಗಾಬರಿಯಲ್ಲಿದ್ದೆ. ಆಗ ಅಲ್ಲೊಬ್ಬ ವ್ಯಕ್ತಿ ನಿಂತು ಹೀಗೆ ಹೇಳಿದರು: ಕೆಳಗೆ ಆಕಾಶದಿಂದ ನೇತಾಡುತ್ತಿರುವ ಹಗ್ಗವನ್ನು ಹಿಡಿದರೆ ಮೇಲಕ್ಕೆ ಹತ್ತಬಹುದು. ಮಿರ್ಝಾ ರಹೀಮ್ ಬಕ್ಷ್ ಸಾಹಿಬ್ ಹೇಳುತ್ತಾರೆ: ಬೆಳಗ್ಗೆ ಇಬ್ರಾಹಿಂ ಸಾಹಿಬ್ ನನ್ನ ಬಳಿಗೆ ಬಂದರು, ನಾನು ಅವರಿಗೆ ಕನಸನ್ನು ವಿವರಿಸಿದಾಗ ಅವರು ಪವಿತ್ರ ಖುರ್‌ಆನ್ ತೆಗೆದು, **'ವಅ್‌ತಸಿಮೂ ಬಿಹಬ್‌ಲಿಲ್ಲಾಹಿ'** ಎಂಬ ಆಯತ್ತನ್ನು ತೋರಿಸಿ, ಇದು ಅಲ್ಲಾಹನ ಹಗ್ಗವನ್ನು ಹಿಡಿದುಕೊಳ್ಳಬೇಕು ಎಂಬುದಕ್ಕಿರುವ ಸಂಕೇತವಾಗಿದೆ ಎಂದು ಹೇಳಿದರು. ನಾನು ಬೈಅತ್‌ಗಾಗಿ ಪತ್ರವನ್ನು ಬರೆದೆನು. ಬೈಅತನ್ನು ಸ್ವೀಕರಿಸಲಾಗಿದೆ, ಆದರೆ ಖಾದಿಯಾನಿಗೆ ಖಂಡಿತವಾಗಿಯೂ ಬನ್ನಿ ಎಂಬ ಉತ್ತರ ಬಂತು. ನಾನು ಅಮೃತಸರ ಸ್ಟೇಷನ್‌ನಿಂದ ಬಟಾಲಾಗೆ ಹೋಗುವ ರೈಲಿನಲ್ಲಿ ಕುಳಿತಾಗ, ಎರಡು ಮೂರು ವಯಸ್ಸಾದ ಸಿಖ್ಖರು ನನ್ನ ಜೊತೆ ಕುಳಿತರು. ಎಲ್ಲಿಗೆ ಹೋಗುತ್ತಿದ್ದೀರಿ ಎಂದು ನನ್ನೊಡನೆ ಕೇಳಿದರು. ಖಾದಿಯಾನಿಗೆ ಎಂದು ನಾನು ಹೇಳಿದೆ. ಮಿರ್ಝಾನ ಖಾದಿಯಾನಿಗೇ? ಎಂದು ಅವರು ಕೇಳಿದರು, ಹೌದು ಎಂದು ನಾನು ಹೇಳಿದೆ. ನಾನು ಹಝ್ರತ್ ಮಸೀಹ್ ಮೌಊದ್[ಅ]ರ ಬಗ್ಗೆ, ಅವರು ಹೇಗಿರುವ ವ್ಯಕ್ತಿಯೆಂದು ಕೇಳಿದೆ? ಆಗ ಅವರು ತಮ್ಮ ತಿಳುವಳಿಕೆಗೆ ತಕ್ಕಂತೆ, ಅವರು ತುಂಬಾ ಪ್ರಸಿದ್ಧ ವ್ಯಕ್ತಿಯಾಗಿರುವರು. ಸ್ವತಃ ತನ್ನನ್ನು ತಾವೇ ದೇವರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ನಾನು ಸುಮ್ಮನೆ ತುಂಟತನದಿಂದ ಹೇಳಿದೆ: ನನಗೆ ಮಿರ್ಝಾರ ಪರಿಚಯವಿದೆ. ಸಿಯಾಲ್ಕೋಟ್‌ನಲ್ಲಿ ಅವರು ಮತ್ತು ನನ್ನ ತಂದೆಯೂ ಉದ್ಯೋಗಿಗಳಾಗಿದ್ದರು, ಅವರಿಬ್ಬರೂ ಒಟ್ಟಿಗೆ ಸೇರಿ ಹುಕ್ಕ ಸೇದುತ್ತಿದ್ದರು. ನಾನು ಅದನ್ನು ಸುಮ್ಮನೆ ತಮಾಷೆಗಾಗಿ ಹೇಳಿದ್ದೆ. ಇದನ್ನು ಕೇಳಿ ಆ ಸಿಖ್ಖರು ಹೇಳಿದರು: ಮಹಾಶಯರೇ, ಹೀಗೆ ಎಂದಿಗೂ ಹೇಳಬೇಡಿರಿ. ಅವರು ಒಬ್ಬ ಸಾಧು ಮನುಷ್ಯ ಮತ್ತು ಅತ್ಯಂತ ಸತ್ಯವಂತ ಹಾಗೂ ವಿಶ್ವಾಸಾರ್ಹ ವ್ಯಕ್ತಿ. ಅವರನ್ನು ಜನರು ಉದಾಹರಣೆಯಾಗಿ ನೀಡುವಷ್ಟು ಅವರು ಪ್ರಸಿದ್ಧರಾಗಿದ್ದಾರೆ. ಯಾರಾದರೂ ಸತ್ಯವನ್ನು ಹೇಳಿದರೆ, ನೀನೇನು ಮಿರ್ಝಾ ಗುಲಾಮ್ ಮುರ್ತಝಾರ ಮಗನೇ? ಎಂದು ನಮ್ಮೊಡನೆ ಜನರು ಕೇಳುತ್ತಾರೆ. ಇದೊಂದು ನಾಣ್ಣುಡಿಯಾಗಿ ಮಾರ್ಪಟ್ಟಿದೆ. ಮತ್ತೊಬ್ಬರು ಹೇಳಿದರು: ಅವರು ಬಾಲ್ಯದಲ್ಲಿ ನಮ್ಮೊಂದಿಗೆ ಆಡುತ್ತಿದ್ದರು, ಅವರು ಸರದಾರನ ಪುತ್ರನಾದ ಕಾರಣ ನಾವು ಅವರನ್ನು ಗೌರವಿಸುತ್ತಿದ್ದೆವು. ನಂತರ ಅವರಲ್ಲಿ ಬದಲಾವಣೆಗಳು ಬರಲಾರಂಭಿಸಿದವು ಮತ್ತು ಅವರು ಒಳಗೆಯೇ ಇರಲು ಪ್ರಾರಂಭಿಸಿದರು, ಅಂದರೆ ಏಕಾಂತವಾಸಿಯಾಗಿದ್ದರು ಮತ್ತು ಒಳಗೆ ಜಾದೂ ಮಾಡುತ್ತಿದ್ದರು (ಅವರು ಹಾಗೆ ತಿಳಿದಿದ್ದರು). ಒಳಗೆ ಕುಳಿತು, ಖಾದಿಯಾನಿನಿಂದ ನಾಲ್ಕು-ನಾಲ್ಕು ಮೈಲುಗಳ ವರೆಗೆ ಅವರು ಜಾದೂ ಮಾಡಿದ್ದರು. ಯಾವುದೇ ಧರ್ಮದ ವ್ಯಕ್ತಿಯು ಅವರ ಬಳಿಗೆ ಬಂದರೆ, ಅವರು ಆತನ ಧರ್ಮದ ಮೂಲಕವೇ ತನ್ನನ್ನು ಸತ್ಯವಂತನೆಂದು ಸಾಬೀತುಪಡಿಸುತ್ತಿದ್ದರು ಮತ್ತು ನಾನು ದೇವನಿಂದ ಬಂದವನು ಎಂದು ಹೇಳುತ್ತಿದ್ದರು. ರಹೀಮ್ ಬಕ್ಷ್ ಸಾಹಿಬ್ ಮಾತನ್ನು ಮುಂದುವರೆಸುತ್ತಾ ಹೇಳುತ್ತಾರೆ: ನಾನು ಅವರಿಂದ ಈ ಮಾತುಗಳನ್ನು ಆಲಿಸಿದೆ. ನಾನು ಖಾದಿಯಾನಿನ ಅತಿಥಿಗೃಹಕ್ಕೆ ಹೋದಾಗ, ಅಲ್ಲಿ ಮೂರು ನಾಲ್ಕು ಹುಡುಗರಿದ್ದರು. ನಾನು ಅವರನ್ನು ಪರೀಕ್ಷಿಸಲು ಕಠಿಣವಾಗಿ ಮಾತನಾಡಿದೆ, ಆದರೆ ನನ್ನ ಕಠಿಣ ಮಾತುಗಳ ಬದಲಿಗೆ ಅವರು ಬಹಳ ಮೃದುವಾಗಿ ಮತ್ತು ಸಭ್ಯತೆಯಿಂದ ವರ್ತಿಸಿದರು. ಆಗ ಖಾದಿಯಾನಿನಲ್ಲಿ ವಿಪರೀತ ಸೆಕೆಯಿತ್ತು. ನಾನು ಹಿಂತಿರುಗಲು ಬಯಸಿದಾಗ ಒಬ್ಬ ಅರಬ್ ವ್ಯಕ್ತಿ ಸಿಕ್ಕಿದ. ಅವರು ಹೇಳಿದರು: ನೀವು ಈಗಷ್ಟೆ ಬಂದಿದ್ದೀರಿ. ಆದ್ದರಿಂದ ಹಝ್ರತ್ ಮಿರ್ಝಾ ಸಾಹಿಬ್[ಅ]ರನ್ನು ನೋಡದೆ ಹಿಂತಿರುಗಬೇಡಿ, ಈ ಕಾಲಘಟ್ಟ ಮತ್ತೆ ಸಿಗುವುದಿಲ್ಲ. ಅಷ್ಟರಲ್ಲಿ ಅಝ್ಹಾನ್ ಆಯಿತು, ಹಾಗಾಗಿ ನಾನು ನಮಾಝ್ ಮಾಡೋಣ ಎಂದು ಯೋಚಿಸಿದೆ. ನಮಾಝಿನ ನಂತರ ಹಝ್ರತ್ ಮಸೀಹ್ ಮೌಊದ್[ಅ] ಜನರೆಡೆಯಲ್ಲಿ (ಸಭೆಗೆ) ಕುಳಿತರು. ಅವರು ತಲೆ ತಗ್ಗಿಸಿ ಕುಳಿತ್ತಿದ್ದರು. ನಾನು ಎದುರಿಗೆ ನಿಂತಿದ್ದೆ. ನನಗೆ ಗಡ್ಡ ಮೀಸೆಯಿರಲಿಲ್ಲ. ಅವರು ನನ್ನ ಮುಖವನ್ನು ನೋಡುವ ವರೆಗೂ ನಾನು ನಂಬುವುದಿಲ್ಲ ಎಂದು ನಾನು ಮನಸ್ಸಿನಲ್ಲೇ ಅಂದುಕೊಂಡೆ. ಸ್ವಲ್ಪ ಸಮಯದ ನಂತರ ಹಝ್ರತ್ ಮಸೀಹ್ ಮೌಊದ್[ಅ] ತಲೆಯೆತ್ತಿ ನೋಡಿದರು, ಆಗ ಹಝ್ರತ್ ಮಸೀಹ್ ಮೌಊದ್[ಅ] ಸತ್ಯವಂತರು ಎಂದು ನಾನು ಮನಸ್ಸಿನಲ್ಲೇ ಹೇಳಿಕೊಂಡೆ. ಮತ್ತೆ ಸ್ವಲ್ಪ ಸಮಯದ ನಂತರ ಅವರು ಮತ್ತೆ ತಲೆಯೆತ್ತಿ ನೋಡಿದರು, ಆಗ ನಾನು **ಆಮನ್ನಾ** (ನಾನು ನಂಬಿದೆ) ಎಂದು ಹೇಳಿದೆ. ಮೂರನೇ ಬಾರಿ ಅವರು ನೋಡಿದಾಗ, ನಾನು ಅವರಿಗಾಗಿ ಅರ್ಪಿತನಾದೆ.

ಹಝ್ರತ್ ಚೌಧರಿ ಸರ್ ಝಫರುಲ್ಲಾಹ್ ಖಾನ್ ಸಾಹಿಬ್[ರ] ವಿವರಿಸುತ್ತಾರೆ: ನಾನು ಮೊದಲ ಬಾರಿಗೆ ಲಾಹೋರ್‌ನಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರನ್ನು ನೋಡಿದಾಗ, ನನ್ನ ಹೃದಯದಲ್ಲಿ ಉಂಟಾದ ಪ್ರಭಾವ, ಅವರು ಸತ್ಯವಂತ ಮತ್ತು ಅವರು ಹೇಳುತ್ತಿರುವುದು ಸತ್ಯವಾಗಿದೆ ಎಂಬುದಾಗಿತ್ತು. ಅಲ್ಲಾಹನ ಕಡೆಯಿಂದ ಹಝ್ರತ್ ಮಸೀಹ್ ಮೌಊದ್[ಅ]ರ ಬಗ್ಗೆ ನನ್ನ ಹೃದಯದಲ್ಲಿ ಎಂತಹ ಪ್ರೀತಿಯು ಮೂಡಿತೆಂದರೆ, ಹಝ್ರತ್ ಮಸೀಹ್ ಮೌಊದ್[ಅ]ರ ಸತ್ಯತೆಗೆ ಅದೇ ನನಗೆ ನಿಜವಾದ

ಪುರಾವೆಯಾಗಿದೆ. ನಾನು ಆಗ ಚಿಕ್ಕವನಾಗಿದ್ದರೂ, ಅಂದಿನಿಂದ ಇಂದಿನವರೆಗೂ ಎಂದಿಗೂ ನನಗೆ ಬೇರೆ ಯಾವುದೇ ಪುರಾವೆಯ ಅಗತ್ಯ ಬರಲಿಲ್ಲ. ಅನಂತರ ನನ್ನ ಸತ್ಯವಿಶ್ವಾಸವನ್ನು ಸುದೃಢಗೊಳಿಸುವಂತಹ ಘಟನೆಗಳು ನಡೆಯುತ್ತಲೇ ಇದ್ದವು. ನಾನು ಹಝ್‌ರತ್ ಮಸೀಹ್ ಮೌಊದ್(ಅ)ರ ಪವಿತ್ರ ಮುಖವನ್ನು ನೋಡಿಯೇ ಅವರಲ್ಲಿ ವಿಶ್ವಾಸ ಕೈಗೊಂಡಿದ್ದೆ. ಆ ಪ್ರಭಾವವೇ ಹಝ್‌ರತ್ ಮಸೀಹ್ ಮೌಊದ್(ಅ)ರ ವಾದದ ಸತ್ಯತೆಗೆ ಈಗಲೂ ನನಗೆ ಅತಿದೊಡ್ಡ ಸಾಕ್ಷಿಯಾಗಿದೆ.

(ಹುಝೂರ್ ಹೇಳಿದರು:) ನಾವು ಈ ವಾಸ್ತವವನ್ನು ಅರ್ಥಮಾಡಿಕೊಂಡು ಸತ್ಯದ ಮೇಲೆ ನಿಲ್ಲುವವರಾಗಲು ಮತ್ತು ಯಾವಾಗಲೂ ಸತ್ಯದ ಉನ್ನತ ಮಟ್ಟವನ್ನು ಪಾಲಿಸುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

―――――――――――*****―――――――――――

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

*Friday Sermon delivered by Hadrath Khaleefatul Masih Al Khamis(atba)*
At, ***'Masjid Mubarak',*** *Islamabad, Tilford,* U.K. On 08-05-2026
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha'at Team for Nazarath Nashr-O-Isha'ath, Qadian
***Email:*** *khutuba.kannada@gmail.com*
**You can find all the Sermons archived at**: www.alislam.org/friday-sermon